MANGALORE MARKET REPORTS
MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.46 ENGLISH DAILY Subscription Yearly - Rs. - WEDNESDAY 29-12-2021

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

# ಒಮಿಕ್ರಾನ್ ಹರಡುವಿಕೆಯಿಂದ ಅಂತಾರಾಷ್ಟ್ರೀಯ ಕಾಫಿ ದರ ಹಿನ್ನಡೆ.

ಯುಎಸ್ ಮುಂತಾದೆಡೆಗಳಲ್ಲಿ ಒಮಿಕ್ರಾನ್ ವೈರಸ್ ಹರಡುವಿಕೆಯಿಂದ ಕಾಫಿ ಬೇಡಿಕೆ ಇಳಿಕೆಯಾಗಿದ್ದು ಅಂತಾರಾಷ್ಟ್ರೀಯ ದರಗಳು ಇಳಿಕೆಯಾಗಿವೆ. ಬ್ರೆಜಿಲ್ ಅರೆಬಿಕಾ ಕಾಫಿ ಉತ್ಪಾದನೆ ಈ ಹಿಂದಿನ ಅಂದಾಜಿಗಿಂತ ಸ್ವಲ್ಪ ಹೆಚ್ಚಿಸಿದ ಕೊನಾಬ್ ವರದಿಯಿಂದಲೂ ದರದ ಮೇಲೆ ಪರಿಣಾಮವಾಗಿರಬಹುದು. ಆದರೂ ಬ್ರೆಜಿಲ್ ದೇಶದ ಉತ್ಪಾದನೆ ಹಿಂದಿನ ವರ್ಷಕ್ಕಿಂತ ಗಣನೀಯ ಇಳಿಕೆಯಾಗುವುದರಿಂದ ಹಾಗೂ ಕೊಲಂಬಿಯಾದಲ್ಲಿ ಅರೆಬಿಕಾ ಕಾಫಿ ಉತ್ಪಾದನೆ ಹಿಂದಿನ ವರ್ಷಕ್ಕಿಂತ ಕಡಿಮೆ ಇರುವುದರಿಂದ ದರ ತುಂಬಾ ಇಳಿಕೆಯಾಗುವ ಸಾಧ್ಯತೆ ವಿರಳ ವಿಯೆಟ್ನಾಂನಿಂದ ರೊಬೊಸ್ಟಾ ಕಾಫಿಯ ರಫ್ತು ಕಡಿಮೆಯಾಗಿರುವುದು. ರೊಬೊಸ್ಟಾ ಕಾಫಿ ದರದ ಮೇಲೆ ಪರಿಣಾಮ ಬೀರಿದೆ. ಪ್ರತಿಕೂಲ ಹವಮಾನದಿಂದ ಮುಂದಿನ ಬೆಳೆಯಲ್ಲೂ ಬ್ರೆಜಿಲ್‌ನಲ್ಲಿ ಕಾಫಿ ಉತ್ಪಾದನೆ ಇಳಿಕೆಯ ಅಂದಾಜು ಮುಂದಿನ ದಿನಗಳಲ್ಲಿ ದರ ಹೆಚ್ಚಳದಲ್ಲಿರಲು ಪೂರಕವಾಗುವ ಸಾಧ್ಯತೆಯಿದೆ.